**ಪಾಠ–12** **ಮಾರ್ಚ್ 13–19**

# ಜನಾಂಗಗಳ ಬಯಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 59, ಯೆಶಾಯ 59:15–21, ಯೆಶಾಯ 60:1,2, ಯೆಶಾಯ 61:2.

**ಸ್ಮರಣವಾಕ್ಯ : "ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು"** (ಯೆಶಾಯ 60:3).

ನಾವು ಯೇಸುಕ್ರಿಸ್ತನ ಪಾಠಶಾಲೆಯಲ್ಲಿ ಕಲಿಯಬೇಕು ಮತ್ತ್ಯಾವುದೂ ಅಲ್ಲ, ಆದರೆ ಆತನ ನೀತಿಯು ಮಾತ್ರ ಒಡಂಬಡಿಕೆಯ ಆಶೀರ್ವಾದಗಳಲ್ಲಿ ಒಂದಾದ ಕೃಪೆಯನ್ನು ಪಡೆಯುವ ಬಾಧ್ಯತೆಯನ್ನು ಕೊಡುತ್ತದೆ. ನಾವು ಬಹಳ ಕಾಲದಿಂದಲೂ ಆಶೆಪಟ್ಟು ಆಶೀರ್ವಾದಗಳನ್ನು ಹೊಂದಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ನಾವು ಅವುಗಳನ್ನು ಹೊಂದಿಕೊಳ್ಳಲಿಲ್ಲ. ಯಾಕೆಂದರೆ ಅವುಗಳನ್ನು ಹೊಂದಿಕೊಳ್ಳಲು ಯೋಗ್ಯತೆ ಪಡೆದುಕೊಳ್ಳಲು ಏನಾದರೊಂದು ಪುಣ್ಯಕಾರ್ಯ ಮಾಡಬೇಕೆಂದು ತಪ್ಪುಭಾವನೆಯನ್ನು ಹೃದಯದಲ್ಲಿ ಬೆಳೆಸಿಕೊಂಡಿದ್ದೇವೆ. ಯೇಸುಕ್ರಿಸ್ತನು ಜೀವಿಸುತ್ತಿರುವ ರಕ್ಷಕನೆಂದು ನಂಬಿರುವಾಗಲೂ ನಮಗೆ ನಮ್ಮನ್ನು ಬಿಟ್ಟು ದೂರ ನೋಡುವುದಕ್ಕೆ ಆಗುತ್ತಿಲ್ಲ. ನಮ್ಮ ಕೃಪೆ ಮತ್ತು ಪುಣ್ಯಕ್ರಿಯೆಗಳು ನಮ್ಮನ್ನು ರಕ್ಷಿಸುತ್ತವೆ ಎಂದು ತಿಳಿಯಬಾರದು; ಯೇಸುಕ್ರಿಸ್ತನ ಕೃಪೆ ಮಾತ್ರ ನಮ್ಮ ರಕ್ಷಣೆಯ ಭರವಸೆಯಾಗಿದೆ. ತನ್ನ ಪ್ರವಾದಿಯ ಮೂಲಕ

* ಈ ಪಾಠವನ್ನು ಮಾರ್ಚ್ 20ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಕರ್ತನು ನಮಗೆ ವಾಗ್ದಾನ ಮಾಡುತ್ತಾನೆ, ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ, ಯಹೋವನ ಕಡೆಗೆ ತಿರುಗಿಕೊಂಡುಬರಲಿ ಆತನು ಅವನನ್ನು ಕರುಣಿಸುವನು, ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾಕೃಪೆಯಿಂದ ಕ್ಷಮಿಸುವನು (ಯೆಶಾಯ 55:7). **"ನಾವು ಮುಚ್ಚು ಮರೆಯಿಲ್ಲದ ವಾಗ್ದಾನಗಳನ್ನು ನಂಬಬೇಕು, ಕೇವಲ ಭಾವನೆಯನ್ನು ನಂಬಿಕೆಯೆಂದು ಒಪ್ಪಿಕೊಳ್ಳಬಾರದು. ದೇವರನ್ನು ನಾವು ಸಂಪೂರ್ಣವಾಗಿ ನಂಬಿದಾಗ, ಯೇಸುಕ್ರಿಸ್ತನನ್ನು ಪಾಪ ಕ್ಷಮಿಸುವ ರಕ್ಷಕನೆಂದು ಆತನ ಯೋಗ್ಯತೆಯನ್ನು ಆತುಕೊಂಡಾಗ ನಾವು ಬಯಸುವ ಎಲ್ಲಾ ಸಹಾಯವನ್ನು ಪಡೆದುಕೊಳ್ಳಬಹುದು"**– ಎಲೆನ್ ಜಿ ವೈಟಮ್ಮನವರ Faith and Works ಪುಸ್ತಕದಲ್ಲಿ 36ನೇ ಪುಟ.

ಈ ವಾರ ನಾವು ಪ್ರವಾದಿ ಯೆಶಾಯನ ಬರಹದಲ್ಲಿ ಪ್ರಕಟವಾಗಿರುವ ಮಹಾನ್‌ಸತ್ಯದಲ್ಲಿ ಹೆಚ್ಚಿನದನ್ನು ಕಾಣುತ್ತೇವೆ.

**ಭಾನುವಾರ** **ಮಾರ್ಚ್ 14**

## ಪಾಪದ ಪರಿಣಾಮಗಳು (ಯೆಶಾಯ 59)

ಯೆಶಾಯ 58:3ರಲ್ಲಿ ಜನರು ದೇವರನ್ನು ಕೇಳುತ್ತಾರೆ: "ನಾವು ಉಪವಾಸ ಮಾಡಿದ್ದೇವೆ, ನೀನು ಏಕೆ ಕಟಾಕ್ಷಿಸುವುದಿಲ್ಲ? ನಮ್ಮ ಆತ್ಮವನ್ನು ಕುಂದಿಸಿಕೊಂಡಿದ್ದೇವೆ, ನೀನು ಗಮನಿಸದಿರುವುದೇಕೆ?

ಇದಕ್ಕೆ ತದ್ವಿರುದ್ಧವಾಗಿ ಯೆಶಾಯ 59:1 ಮತ್ತೊಂದು ಪ್ರಶ್ನೆಯನ್ನು ಸೂಚಿಸುತ್ತದೆ. ನಾವು ದೇವರ ಹಸ್ತವನ್ನು ರಕ್ಷಣೆ ಮಾಡಬೇಕೆಂದು ಕೇಳಿಕೊಂಡೆವು. ಆದರೆ ನೀನು ಏಕೆ ರಕ್ಷಿಸಲಿಲ್ಲ? ನಾವು ನಿನಗೆ ಮೊರೆಯಿಟ್ಟೆವು. ಆದರೆ ನೀನು ನಮ್ಮನ್ನು ಯಾಕೆ ಕೇಳಲಿಲ್ಲ? ಅದಕ್ಕೆ ಯೆಶಾಯನು ದೇವರು ನಿಮ್ಮನ್ನು ರಕ್ಷಿಸುತ್ತಾನೆ ಮತ್ತು ಮೊರೆಯನ್ನು ಕೇಳುತ್ತಾನೆ ಎಂದು ಹೇಳುತ್ತಾನೆ (ಯೆಶಾಯ 59:1). ಆತನು ಇವೆರಡನ್ನು ಮಾಡುವುದಕ್ಕೆ ವಿಫಲನಾಗುತ್ತಾನೆ ಎಂಬುದು ಸಂಪೂರ್ಣವಾಗಿ ಬೇರೊಂದು ವಿಷಯವಾಗಿದೆ. ಅದೇನೆಂದು ನೋಡೋಣ.

ಯೆಶಾಯ 59:2ನ್ನು ಓದಿರಿ. ಇದರಲ್ಲಿ 59:1 ರಲ್ಲಿರುವ ಪ್ರಶ್ನೆಗಳಿಗೆ ಉತ್ತರ ಯಾವ ಸಂದೇಶವಿದೆ?

ದೇವರು ತನ್ನ ಜನರನ್ನು ಅಲಕ್ಷ್ಯ ಮಾಡಲು ಇಷ್ಟಪಡುವುದಿಲ್ಲ. ಆದರೆ ನಿಮ್ಮ ಪಾಪಗಳು ನಿಮ್ಮನ್ನು ನಿಮ್ಮ ದೇವರಿಂದ ಅಗಲಿಸುತ್ತವೆ (ಯೆಶಾಯ 59:2). ಪಾಪದ ದೆಸೆಯಿಂದ ದೇವರ ಮತ್ತು ಮಾನವನ ಸಂಬಂಧದ ಮೇಲೆ ಆಗುವ ಪರಿಣಾಮಗಳ ವಿಷಯದಲ್ಲಿ ಸತ್ಯವೇದದ ಹೇಳಿಕೆಗಳಲ್ಲಿ ಇದು ಒಂದು ಸ್ಪಷ್ಟವಾದ ಹೇಳಿಕೆಯಾಗಿದೆ. ಯೆಶಾಯನು 59ನೇ ಅಧ್ಯಾಯದ ಉಳಿದ ವಚನದಲ್ಲಿ ಈ ವಿಷಯವನ್ನು ವಿವರವಾಗಿ ವರ್ಣಿಸುತ್ತಾ ಹೋಗುತ್ತಾನೆ.

ಇದನ್ನು ಚರಿತ್ರೆಯಾದ್ಯಂತ ನಾವು ಕಾಣಬಹುದು. ಪಾಪವು ಕರ್ತನೊಂದಿಗೆ ನಮಗಿರುವ ಸಂಬಂಧವನ್ನು ನಾಶ ಮಾಡುತ್ತದೆ ಮತ್ತು ಶಾಶ್ವತವಾದ ವಿನಾಶದ ಕಡೆಗೆ ನಡೆಸುತ್ತದೆ– ಯಾಕೆಂದರೆ ಪಾಪಗಳು ದೇವರನ್ನು ನಮ್ಮಿಂದ ದೂರ ಹೋಗುವಂತೆ ಮಾಡುವುದಿಲ್ಲ. ಆದರೆ ನಮ್ಮನ್ನು ದೇವರಿಂದ ದೂರ ಹೋಗುವಂತೆ ಮಾಡುತ್ತವೆ.

ಆದಿಕಾಂಡ 3:8ನ್ನು ಓದಿರಿ. ಈ ಉದಾಹರಣೆಯು ಮೇಲೆ ವ್ಯಕ್ತವಾಗಿರುವ ತತ್ವವನ್ನು ಹೇಗೆ ಪ್ರಕಟಪಡಿಸುತ್ತದೆ?

ಪಾಪವು ಪ್ರಾಥಮಿಕವಾಗಿ ನಾವು ದೇವರನ್ನು ತಿರಸ್ಕರಿಸುವುದು, ಆತನೆಡೆಯಿಂದ ತಿರುಗಿಕೊಂಡು ದೂರಕ್ಕೆ ಹೋಗುವುದು. ಪಾಪವು ನಿಜವಾಗಿ ತಮ್ಮನ್ನು ತಾನು ಹೇಳು ಮಾಡಿಕೊಳ್ಳುವ ಕೆಲಸವನ್ನು ಮಾಡುತ್ತದೆ. ಅಂದರೆ ಆ ಕೆಲಸವು ದೇವರಿಗೆ ದೂರವಾಗುತ್ತದೆ. ಅದರ ಪರಿಣಾಮದಿಂದ ಅದನ್ನು ಮಾಡಿದವನು (ಪಾಪಿಯು) ದೇವರಿಂದ ದೂರ ಸರಿಯುತ್ತಾನೆ. ಪಾಪವು ನಮ್ಮನ್ನು ದೇವರಿಂದ ಪ್ರತ್ಯೇಕಪಡಿಸುತ್ತದೆ. ಅಂದರೆ ದೇವರು ಪಾಪಿಯನ್ನು ತಲುಪಿಸಲಾರದಂತೆ ಮಾಡುವುದರಿಂದಲ್ಲ (ನಿಜವಾಗಿ, ಇಡೀ ಸತ್ಯವೆದವು ಪಾಪಿಗಳನ್ನು ರಕ್ಷಿಸುವ ಸಲುವಾಗಿ ದೇವರು ಅವರನ್ನು ಬೆನ್ನಟ್ಟಿ ಹೋಗುವ ನಿದರ್ಶನಗಳನ್ನು ಹೊಂದಿದೆ) ಆದರೆ ಪಾಪವು ದೈವೀಕ ಸಂಧಾನವನ್ನು ನಾವು ತಿರಸ್ಕರಿಸುವಂತೆ ಮಾಡುವುದರಿಂದ ದೂರ ಸರಿಯುತ್ತಾ ಹೋಗುತ್ತೇವೆ. ಆದುದರಿಂದ, ನಾವು ನಮ್ಮ ಜೀವಿತದಲ್ಲಿ ಯಾವ ಪಾಪವನ್ನೂ ಸಹಿಸಿಕೊಳ್ಳಲಾರೆವು ಎಂಬುದು ಬಹಳ ಮುಖ್ಯವಾದ ವಿಷಯ.

ಪಾಪವು ನಮ್ಮನ್ನು ದೇವರಿಂದ ಪ್ರತ್ಯೇಕ ಪಡಿಸುವುದನ್ನು ವಾಸ್ತವಿಕವಾಗಿ ಯಾವ ರೀತಿಯಲ್ಲಿ ನೀವು ಅನುಭವಿಸಿದ್ದೀರಿ? ನಿಮ್ಮ ಸ್ವಂತ ಅನುಭವದಲ್ಲಿ ಈ ಸಮಸ್ಯೆಗೆ ಇರುವ ಒಂದೇ ಪರಿಹಾರವೇನು?

**ಸೋಮವಾರ** **ಮಾರ್ಚ್ 15**

## ಕ್ಷಮಿಸಲ್ಪಟ್ಟವರು ಯಾರು? (ಯೆಶಾಯ 59:15–21)

ಯೆಶಾಯ 59ನೇ ಅಧ್ಯಾಯವು ಪಾಪದ ಸಮಸ್ಯೆಯನ್ನು ಕುರಿತು ಒಂದು ಗಾಬರಿ ಪಡಿಸುವ ಚಿತ್ರವನ್ನು ಮಂಡಿಸುತ್ತದೆ. ಸತ್ಯವೇದವು ನಮಗೆ ವಿಮೋಚನೆಯ ನಿರೀಕ್ಷೆಯನ್ನು ಸಹಾ ಕೊಡುವುದು ಸುದೈವವೇ ಸರಿ? ಮೊದಲ ಪ್ರಶ್ನೆಯಿಂದ ಆರಂಭಿಸೋಣ, ನಮ್ಮಲ್ಲಿ ಎಷ್ಟು ಜನರು ಪಾಪವೆಸಗಿದ್ದಾರೆ? ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ. ಆದುದರಿಂದ ವಿಮೋಚನೆ ಎಂಬುದು ಪಾಪವಿಲ್ಲದುದರ ಮೇಲೆ ಆಧಾರವಾಗಿಲ್ಲ; ಇದು ಕ್ಷಮಾಪಣೆಯ ಮೇಲೆ ಆಧಾರಗೊಂಡಿದೆ (ಯೆರೆ 31:34). ಪೌಲನು ಎಲ್ಲರು ಪಾಪ ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ (ರೋಮ 3:9–20, 23). ಆದುದರಿಂದ ಅದರ ಆಧಾರದ ಮೇಲೆ ಉತ್ತಮ ಶ್ರೇಣಿ ಎಂಬುದಿಲ್ಲ (ರೋಮ 3:22). ಯಾರು ನೀತಿ ನಿರ್ಣಯವನ್ನು ಹೊಂದಿರುತ್ತಾರೋ ಅವರು ನೀತಿವಂತರೆಂದು ತೀರ್ಪು ಹೊಂದುತ್ತಾರೆ. ಅವರು ಯೇಸುಕ್ರಿಸ್ತನ ಬಲಿದಾನದ ಮೂಲಕ ನಂಬಿಕೆಯಿಂದ ಮಾತ್ರ ದೇವರ ಬಹುಮಾನವಾದ ನೀತಿಯನ್ನು ಪಡೆದುಕೊಂಡಿರುತ್ತಾರೆ.

ರೋಮಾಪುರದವರಿಗೆ 3:21–24ನ್ನು ಓದಿರಿ. ನಾವು ಹೇಗೆ ರಕ್ಷಣೆ ಪಡೆದುಕೊಂಡಿದ್ದೇವೆ ಎಂಬುದರ ಬಗ್ಗೆ ಈ ವಚನಗಳು ಏನು ಹೇಳುತ್ತವೆ? ನ್ಯಾಯವಿಚಾರಣೆಯಲ್ಲಿ ಯಾವ ಭರವಸೆಯನ್ನು ಇವು ನಮಗೆ ಕೊಡುತ್ತವೆ?

ನ್ಯಾಯವಿಚಾರಣೆಯಲ್ಲಿ ಕೇಳುವ ಪ್ರಶ್ನೆ ಯಾರು ಪಾಪ ಮಾಡಿದ್ದಾರೆ? ಎಂದು ಬಹುತೇಕ ಜನರು ನೆನೆಸುತ್ತಾರೆ. ಆದರೆ ಅಲ್ಲಿ ಕೇಳಬೇಕಾದ ಪ್ರಶ್ನೆ ಅದಲ್ಲ ಯಾಕೆಂದರೆ ಎಲ್ಲರೂ ಪಾಪ ಮಾಡಿದ್ದಾರೆ. ಇದರ ಬದಲು ಯಾರು ಕ್ಷಮಿಸಲ್ಪಟ್ಟಿದ್ದಾರೆ? ಎಂಬುದು ಪ್ರಶ್ನೆಯಾಗಿರುತ್ತದೆ. ಯೇಸುಕ್ರಿಸ್ತನ ಮೇಲೆ ನಂಬಿಕೆ

ಇಟ್ಟವನಿಗೆ ದೇವರು ನೀತಿನಿರ್ಣಯ ಮಾಡುವಾಗ ನ್ಯಾಯವಂತನೆ ಆಗಿರುತ್ತಾನೆ (ರೋಮ 3:26). ನ್ಯಾಯವಿಚಾರಣೆಯಲ್ಲಿ ಯೇಸುಕ್ರಿಸ್ತನ ನಂಬಿಕೆಯಿಂದ ಯಾರು ಕ್ಷಮಾಪಣೆ ಹೊಂದಿದರು ಮತ್ತು ಹೊಂದಿಕೊಳ್ಳುತ್ತಾ ಮುಂದುವರೆದರು ಎಂಬುದು ನಿರ್ಣಯಾತ್ಮಕ ಅಂಶವಾಗಿರುತ್ತದೆ.

ಈವಾಗ, ನಾವು ನಮ್ಮ ಕ್ರಿಯೆಗಳ ಆಧಾರದ ಮೇಲೆ ತೀರ್ಪು ಹೊಂದುತ್ತೇವೆ ಎಂಬುದು ನಿಜವಾದ ವಿಷಯ, ಆದರೆ ನಮ್ಮ ಕ್ರಿಯೆಗಳು ನಮ್ಮನ್ನು ರಕ್ಷಿಸುತ್ತವೆ ಎಂಬ ಅರ್ಥದಲ್ಲಿ ಇದನ್ನು ತೆಗೆದುಕೊಳ್ಳಬಾರದು. ಹಾಗೆ ತೆಗೆದುಕೊಂಡರೆ ನಂಬಿಕೆಯು ವ್ಯರ್ಥವಾಗುತ್ತದೆ (ರೋಮ 4:14). ಇದನ್ನು ನಮ್ಮ ಕ್ರಿಯೆಗಳು ನಾವು ನಿಜವಾಗಿಯೂ ರಕ್ಷಣೆ ಹೊಂದಿದ್ದೇವೆಯೋ ಅಥವಾ ಇಲ್ಲವೋ ಎಂಬುದನ್ನು ತೋರಿಸಿಕೊಡುತ್ತವೆ ಎಂಬುದಾಗಿ ಅರ್ಥಮಾಡಿಕೊಳ್ಳಬೇಕು (ಯಾಕೋಬ 2:18).

ಈಗಾಗಲೇ ಆಗಲಿ ಅಥವಾ ನ್ಯಾಯವಿಚಾರಣೆಯಲ್ಲೇ ಆಗಲಿ ನಮ್ಮ ಕ್ರಿಯೆಗಳು ನಮ್ಮನ್ನು ರಕ್ಷಿಸಲಾರವು ಏಕೆ? (ರೋಮ 3:20, 23ನ್ನು ನೋಡಿರಿ).

ಒಳ್ಳೆಯ ಕೆಲಸಗಳಿಂದಾಗಲೀ ಅಥವಾ ಧರ್ಮಶಾಸ್ತ್ರಕ್ಕೆ ವಿಧೇಯರಾಗುವುದರಿಂದಾಗಲಿ ವಿಮೋಚನೆ (ರಕ್ಷಣೆ) ಯಾಗುವುದು ಬಹಳ ತಡವಾದ ವಿಷಯ. ಈ ಪಾಪತುಂಬಿದ ಲೋಕದಲ್ಲಿ ಧರ್ಮಶಾಸ್ತ್ರದ ಉದ್ದೇಶ ರಕ್ಷಿಸುವುದಕ್ಕಲ್ಲ. ಆದರೆ ಪಾಪವೆಂದರೆ ಏನೆಂಬುದನ್ನು ಬೆಟ್ಟು ಮಾಡಿ ತೋರಿಸುವುದಕ್ಕೆ. ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ರಕ್ಷಣೆ ಎಂಬುದು ಸರಿ (ಗಲಾತ್ಯ 5:6). ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ (ರೋಮ 5:5). ಇದು ವ್ಯಕ್ತಿಯು ಯೇಸುಕ್ರಿಸ್ತನಲ್ಲಿ ಜೀವವುಳ್ಳ ನಂಬಿಕೆಯನ್ನು ಹೊಂದಿದ್ದಾನೆಂದು ತೋರಿಸಿ ಕೊಡುತ್ತದೆ (ಯಾಕೋಬ 2:26ನ್ನು ಸಹಾ ನೋಡಿರಿ).

ಕ್ರಿಯೆಗಳು ಮನುಷ್ಯರು ಹೊಂದಿರುವ ನಂಬಿಕೆಯನ್ನು ಹೊರಜಗತ್ತಿಗೆ ತೋರಿಸಿ ಕೊಡುತ್ತವೆ. ಆದುದರಿಂದ ನಿಜವಾದ ಕ್ರೈಸ್ತೀಯ ಅನುಭವ ಎಂಬುದು ಧರ್ಮಶಾಸ್ತ್ರಕ್ಕೆ ವಿಧೇಯವಾಗುವುದರಲ್ಲಿ ಪ್ರಕಟವಾಗುವ ನಂಬಿಕೆಯನ್ನು ಪ್ರತಿನಿತ್ಯವು

ಬದ್ಧತೆಯಿಂದ ದೇವರಿಗೆ ವ್ಯಕ್ತಪಡಿಸುವುದೇ ಆಗಿದೆ. ನ್ಯಾಯವಿಚಾರಣೆಯಲ್ಲಿ ತಾನು ಸೃಷ್ಟಿಸಿದ ಜೀವಿಗಳು ನಂಬಿಕೆಯ ಆಲೋಚನೆಗಳನ್ನು ತನ್ನಂತೆ ಓದಿಕೊಳ್ಳಲಾಗದ ಕಾರಣ ದೇವರು ಕ್ರಿಯೆಗಳನ್ನು ನಂಬಿಕೆಗೆ ಪುರಾವೆಯನ್ನಾಗಿ (ಸಾಕ್ಷಿಯನ್ನಾಗಿ) ಉಪಯೋಗಿಸುತ್ತಾನೆ. ಆದರೆ ಒಬ್ಬ ವ್ಯಕ್ತಿಯು ಮಾನಸಾಂತರಪಟ್ಟ ಮೇಲೆ ತಕ್ಕ ಕ್ರಿಯೆಗಳಿಂದ ಮಾನಸಾಂತರವಾಗಿರುವುದನ್ನು ತೋರ್ಪಡಿಸಬೇಕು, ಜೀವನವು ಕ್ರಿಸ್ತನಿಂದಲೂ ಪವಿತ್ರಾತ್ಮನಿಂದಲೂ ಬಲವರ್ಧನೆಗೊಂಡಿರುವಾಗ ನ್ಯಾಯವಿಚಾರಣೆಯಲ್ಲಿ ಕ್ರಿಯೆಗಳು ಸಂಗತವಾಗಿರುತ್ತವೆ. ಮಾನಸಾಂತರವಾಗುವ ಮುಂಚೆ ಮಾಡಿದ ಎಲ್ಲಾ ಪಾಪಗಳು ಯಜ್ಞದ ಕುರಿಯಾದಾತನ ರಕ್ತದಿಂದ ತೊಳೆಯಲ್ಪಟ್ಟು ಕೊಚ್ಚಿ ಹೋಗಿರುತ್ತವೆ (ರೋಮ 6ನೇ ಅಧ್ಯಾಯ ನೋಡಿರಿ).

**ಮಂಗಳವಾರ** **ಮಾರ್ಚ್ 16**

## ಸಾರ್ವತ್ರಿಕ ಮನವಿ (ಯೆಶಾಯ 60:1,2)

ಯೆಶಾಯ 60:1,2 ವಚನಗಳು ಯಾವುದರ ಬಗ್ಗೆ ಹೇಳುತ್ತವೆ? ಸತ್ಯವೇದದಾದ್ಯಂತ ತೋರಿಬರುವ ಯಾವ ನಿಯಮವನ್ನು ಇಲ್ಲಿ ನೀವು ಕಾಣುವಿರಿ? ಯಾವ ನಿರೀಕ್ಷೆಯನ್ನು ಇದು ಕೊಡುತ್ತದೆ?

ಯೆಶಾಯ 60:1,2 ವಚನಗಳಲ್ಲಿ ದೇವರು ತನ್ನ ಜನರನ್ನು ಬಿಡುಗಡೆ ಮಾಡಿದ ಗಡಿಪಾರದ ಬಳಿಕ ಬಿಡುಗಡೆ ಮಾಡಿದ ಚಿತ್ರವನ್ನು ನಮಗೆ ಕೊಡುತ್ತವೆ.

ದೇವರು ಕತ್ತಲೆಯಿಂದ ಜನರನ್ನು ತನ್ನ ಬೆಳಕಿಗೆ ಕರೆದು ಅಂತ್ಯದಲ್ಲಿ ಯೇಸುಕ್ರಿಸ್ತನ ಮೂಲಕ ಉಂಟಾಗುವ ರಕ್ಷಣೆಯ ಚಿತ್ರಣವನ್ನು ಇದು ಕೊಡುತ್ತದೆ.

ಯೆಶಾಯ 60:3ರಲ್ಲಿ ಯಾರ ಬೆಳಕಿಗೆ ಜನಾಂಗಗಳು ಮತ್ತು ರಾಜರು ನೆರೆದು ಬರುವರು?

ಇಬ್ರಿಯ ಭಾಷೆಯ ಈ ವ್ಯಕ್ತಿಯನ್ನು ಒಬ್ಬ ಸ್ತ್ರೀಯಂತೆ ವಿವರಿಸುತ್ತದೆ (ಯೆಶಾಯ 60:1,2ನ್ನು ಸಹಾ ನೋಡಿರಿ). ಇದು ಚೀಯೋನ್ ಆಗಿದ್ದು ಇದನ್ನು ಸ್ತ್ರೀಯಂತೆ ಸಂಬೋಧಿಸಲಾಗಿದೆ, ಹಿಂದಿನ ಅಧ್ಯಾಯದಲ್ಲಿ ಉಲ್ಲೇಖವಾಗಿದೆ (ಯೆಶಾಯ

59:20). ಹಾಗಾಗಿ ಭೂಲೋಕದ ಜನರು ಕತ್ತಲೆಯಿಂದ ಚಿಯೋನಿಗೆ ಆಗಮಿಸುವರು. ಆಕೆಯ ಮೇಲೆ ಉದಯಿಸಿದ ದೇವರ ತೇಜಸ್ಸಿನ ಬೆಳಕಿಗೆ ಅವರು ಸೆಳೆಯಲ್ಪಡುತ್ತಾರೆ (ಯೆಶಾಯ 60:2) ಚೀಯೋನಿಗಿರುವ ಬೆಳಕಿಗೆ ಪ್ರವೇಶಿಸಲು, ಆ ಬೆಳಕಿಗೆ ನೆರೆದು ಬರುವವರನ್ನು ನೋಡಲು ಮತ್ತು ಅವರಿಗೆ ಪ್ರತಿಕ್ರಿಯೆ ನೀಡಲು ಆಕೆಯು ಕರೆಯಲ್ಪಡುತ್ತಾಳೆ – J. Alec Motyer, The Prophecy of Isaiah 494ನೇ ಪುಟ. ಚೀಯೋನ್ ಮತ್ತು ಯೆರೂಸಲೇಮ್ ಒಂದೇ ಆಗಿದ್ದು ಈ ಪಟ್ಟಣದ ಜಾಗಕ್ಕಿಂತ ಪಟ್ಟಣದ ಜನರ ಮೇಲೆ ಹೆಚ್ಚಿನ ಒತ್ತು ನೀಡಿರುವುದನ್ನು ಗಮನಿಸಿರಿ.

ಯೆಶಾಯ 60ನೇ ಅಧ್ಯಾಯದ ಉಳಿದ ವಚನಗಳು 1 ರಿಂದ 3 ವಚನದ ವಿಷಯವನ್ನು ಪ್ರಸ್ತುತ ಪಡಿಸುತ್ತದೆ. ಲೋಕದ ಜನರು ಯೆರೂಸಲೇಮಿಗೆ ಸೆಳೆಯಲ್ಪಡುತ್ತಾರೆ. ಯೆರೂಸಲೇಮು ದೇವರ ಪ್ರಭಾವದಿಂದ ಆಶೀರ್ವದಿಸಲು ಬರುತ್ತದೆ.

ಈ ಪ್ರವಾದನೆಯನ್ನು ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ವಾಗ್ದಾನಕ್ಕೆ ಹೇಗೆ ಹೋಲಿಕೆ ಮಾಡುವಿರಿ? (ಆದಿಕಾಂಡ 12:2,3).

ದೇವರು ಅಬ್ರಹಾಮ ಮತ್ತು ಆತನ ವಂಶಸ್ಥರನ್ನು ಸಾರ್ವತ್ರಿಕವಾದ ಉದ್ದೇಶದಿಂದ ಆಯ್ದುಕೊಂಡನು. ಅಬ್ರಹಾಮನ ಮೂಲಕ ಲೋಕದ ಎಲ್ಲಾ ಕುಲಗಳು ಆಶೀರ್ವಾದ ಹೊಂದುತ್ತವೆ. ಆದಿಕಾಂಡ 12:3, ಆ.ಕಾಂಡ 18:18 ಮತ್ತು ಆದಿಕಾಂಡ 22:18). ಆದುದರಿಂದ ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಅಂತಿಮವಾಗಿ ಮಾನವ ಕುಲದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶದಿಂದ ಕೂಡಿದೆ. ಲೋಕಕ್ಕೆ ದೇವರು ಪ್ರಕಟನೆಯನ್ನು ತಲುಪಿಸುವ ಕಾಲುವೆಯಂತೆ ಅಬ್ರಹಾಮ ಮತ್ತು ಆತನ ವಂಶಸ್ಥರು ಆರಿಸಲ್ಪಟ್ಟರು.

ಯೆಶಾಯನು ತನ್ನ ಜನರನ್ನು ಪುರಾತನವಾದ ಸಾರ್ವತ್ರಿಕವಾದ (ಲೋಕದ ಎಲ್ಲಾ ಜನರಿಗೆ ಅನ್ವಯವಾಗುವ) ದೈವೀಕ ಉದ್ದೇಶಕ್ಕೆ ಹಿಂದಿರುಗಿಸಲು ಪ್ರಯತ್ನ

ಪಟ್ಟನು. ದೇವರ ಪ್ರತಿನಿಧಿಗಳಾಗಿ ಅವರು ತಮ್ಮ ಮಟ್ಟಿಗೆ ಮಾತ್ರವಲ್ಲದೆ ಇಡೀ ಲೋಕಕ್ಕೆ ಜವಾಬ್ದಾರಿಯುಳ್ಳವರಾಗಿದ್ದರು.

ದೇವರು ಹುಡುಕುವ ಅನ್ಯದೇಶೀಯರನ್ನೂ ಸಹಾ ಅವರು ಆಹ್ವಾನ ಮಾಡಬೇಕಾಗಿತ್ತು (ಯೆಶಾಯ 56:3–8ನ್ನು ನೋಡಿರಿ). ಯಾಕೆಂದರೆ "ಆತನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವುದು" (ಯೆಶಾಯ 56:7).

ಈ ಸಾಂದರ್ಭಿಕ ಹಿನ್ನೆಲೆಯಿಂದ ನಿಮ್ಮ ಅಥವಾ ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯ ಪಾತ್ರವೇನೆಂದು ನೀವು ಅರ್ಥಮಾಡಿಕೊಳ್ಳುವಿರಿ?

**ಬುಧವಾರ** **ಮಾರ್ಚ್ 17**

## "ಯೆಹೋವನು ನೇಮಿಸಿರುವ ಶುಭ ವರುಷ" (ಯೆಶಾಯ 61:2)

ಯೆಶಾಯ 61:1ನೇ ವಚನದಲ್ಲಿ ಯಾರು ಮಾತಾಡುತ್ತಿದ್ದಾರೆ?

ದೇವರ ಆತ್ಮನು ಆತನು ಅಭಿಷೇಕಿಸಿದವನ ಮೇಲೆ ಇದೆ ಎಂದರೆ ಆತನು ಮೆಸ್ಸೀಯರಲ್ಲೊಬ್ಬನು ಅಥವಾ ಆತನೇ ಮೆಸ್ಸೀಯನು "ಆತನು ಬಡವರಿಗೆ ಶುಭವರ್ತಮಾನವನ್ನು ತರುತ್ತಾನೆ, ಮನಮುರಿದವರನ್ನು ಕಟ್ಟಿ ವಾಸಿ ಮಾಡುತ್ತಾನೆ, ಸೆರೆಯವರಿಗೆ ಬಿಡುಗಡೆಯನ್ನು ಸಾರುತ್ತಾನೆ. ಬಂದಿಗಳಿಗೆ ಕದ ತೆರೆಯುವುದನ್ನು ಪ್ರಸಿದ್ಧ ಪಡಿಸುತ್ತಾನೆ" (ಯೆಶಾಯ 61:1). ಹೀಗೆ ಮಾಡುವವನು ಯಾರೆಂದು ಅನಿಸುತ್ತದೆ? ಯೆಶಾಯ 42:1–7 ವಚನಗಳಿಗೆ ಹೋಲಿಕೆ ಮಾಡಿರಿ. ಇಲ್ಲಿ ದೇವರ ಸೇವಕನು ಇದೇ ತರವಾಗಿ ವಿವರಿಸಲ್ಪಟ್ಟಿದ್ದಾನೆ.

ಯೆಶಾಯ 61:2ನೇ ವಚನವು "ಯೆಹೋವನು ನೇಮಿಸಿರುವ ಶುಭವರುಷದ" ಬಗ್ಗೆ ಹೇಳುತ್ತದೆ. ದಾವೀದನ ಸಿಂಹಾಸನಾಧೀಶನಾಗಿಯೂ ವಿಮೋಚಕನಾಗಿಯೂ ಅಭಿಷಿಕ್ತನಾದ ಮೆಸ್ಸೀಯನು ಬಿಡುಗಡೆಯನ್ನು ಸಾರುವ ಸಂದರ್ಭದಲ್ಲಿಯೇ ದೇವರು ನೇಮಿಸಿರುವ ಶುಭ ವರುಷವನ್ನು ಸಾರುತ್ತಾನೆ. ಯಾಜಕಕಾಂಡ 25:10ರನ್ನು ಹೋಲಿಸಿರಿ. ಇಲ್ಲಿ ದೇವರು ದೇಶವಾಸಿಗಳಿಗೆ 50ನೇ ವರ್ಷದಲ್ಲಿ ಬಿಡುಗಡೆಯನ್ನು ಸಾರಿರಿ ಎಂಬುದಾಗಿ ಇಸ್ರಾಯೇಲ್ಯರಿಗೆ ಆಜ್ಞಾಪಿಸುತ್ತಾನೆ. ಆ ವರುಷವು ನಿಮಗೆ ಜೂಬಿಲಿ ಸಂವತ್ಸರವಾಗಿರುವುದರಿಂದ ನೀವೆಲ್ಲರು ನಿಮ್ಮ

ನಿಮ್ಮ ಭೂಮಿಗಳಿಗೂ ಸ್ವಜನರ ಬಳಿಗೂ ಹೋಗಿ ಇರಬಹುದು. ಕಷ್ಟದ ದಿನಗಳಲ್ಲಿ ಯಾರ್ಯಾರು ತಮ್ಮ ಭೂಮಿಯನ್ನು ಇತರರಿಗೆ ಮಾರಿದ್ದರೋ ಮತ್ತು ತಮ್ಮನ್ನು ತಾವು ಇತರರಿಗೆ ದಾಸರನ್ನಾಗಿ ಮಾರಿಕೊಂಡಿದ್ದರೋ ಅವರೆಲ್ಲ ಮತ್ತೆ ತಮ್ಮ ಭೂಮಿಯನ್ನು ತಿರುಗಿ ಪಡೆದುಕೊಳ್ಳುತ್ತಿದ್ದರು ಮತ್ತು ದಾಸರಾದವರಿಗೆ ಬಿಡುಗಡೆಯಾಗುತ್ತಿತ್ತು (ಯಾ.ಕಾಂಡ 25:25–55).

ಯಾಕೆಂದರೆ ಜೂಬಿಲಿ ಸಂವತ್ಸರದ ಆರಂಭದಲ್ಲೇ ಸಕಲ ದೋಷ ಪರಿಹಾರಕ ದಿನದಂದೇ ಕೊಂಬನ್ನು ಧ್ವನಿ ಮಾಡಿಸಬೇಕಾಗಿತ್ತು (ಯ.ಕಾಂಡ 25:9). ಯೆಶಾಯ 58ನೇ ಅಧ್ಯಾಯಕ್ಕೆ ಸಂಬಂಧಿಸಿದ ಹಾಗೆ ಈ ವಚನಗಳನ್ನು ಈಗಾಗಲೇ ಉಲ್ಲೇಖ ಮಾಡಲಾಗಿದೆ.

ಯೆಶಾಯ 61:2ರಲ್ಲಿ ಉಲ್ಲೇಖಿಸಿರುವ "ಯೆಹೋವನು ನೇಮಿಸಿದ ಶುಭ ವರುಷವು" ಒಂದು ರೀತಿಯಲ್ಲಿ ಜೂಬಿಲಿ ಸಂವತ್ಸರವಾಗಿದೆ. ಇದು ಕೇವಲ ಯಾಜಕಕಾಂಡದ 25ನೇ ಅಧ್ಯಾಯದಲ್ಲಿರುವ ಸಂವತ್ಸರವನ್ನು ಆಚರಿಸುತ್ತಿದ್ದಂತಲ್ಲ. ಈ ಸಂವತ್ಸರವು ಅಭಿಷಿಕ್ತನಾದ ಅರಸನಿಂದ (ಮೆಸ್ಸೀಯ) ಪ್ರಕಟಗೊಂಡಿದೆ. ಆತನು ತನ್ನನ್ನು ತಾನು ಬಿಡುಗಡೆಯ ಮತ್ತು ಪುನರ್‌ಸ್ಥಾಪನೆಯ ಸೇವೆಯ ಮೂಲಕ ಪ್ರಕಟಪಡಿಸಿಕೊಳ್ಳುವಾಗಲೇ ಈ ಸಂವತ್ಸರವನ್ನು ಪ್ರಕಟಿಸಿದ್ದಾನೆ. ಇದು ಮೆಸಪೊಟೇಮಿಯದ ಅರಸರು ತಮ್ಮ ಆಳ್ವಿಕೆಯ ಆರಂಭದಲ್ಲಿ ಪ್ರಜೆಗಳಿಗೆ ಪರೋಪಕಾರ ಮಾಡುವ ಸಲುವಾಗಿ ಜನರ ಸಾಲಗಳನ್ನು ಮನ್ನ ಮಾಡಿ ಸೆರೆಯಲ್ಲಿರುವವರಿಗೆ ಬಿಡುಗಡೆಯನ್ನು ಘೋಷಿಸುತ್ತಿದ್ದರ ಅನುಕರಣೆಯಂತಿತ್ತು. ಮೆಸ್ಸೀಯನ ಸೇವೆಯು ಯಾಜಕ ಕಾಂಡ 25ನೇ ಅಧ್ಯಾಯದಲ್ಲಿರುವುದಕ್ಕಿಂತ ಬಹಳ ದೊಡ್ಡ ಪ್ರಮಾಣದ್ದಾಗಿತ್ತು. ಆತನು ಸೆರೆಯವರಿಗೆ ಬಿಡುಗಡೆಯನ್ನು ಸಾರುವುದರ ಜೊತೆಗೆ ಮನಮುರಿದವರಿಗೆ ಕಟ್ಟಿವಾಸಿ ಮಾಡುತ್ತಾನೆ, ಎಲ್ಲಾ ಒಳ್ಳೆಯದನ್ನು ಕೊಟ್ಟು ಅವರನ್ನು ಮರುಸ್ಥಾಪನೆ ಮಾಡುತ್ತಾನೆ (ಯೆಶಾಯ 61:1–11). ಇದರ ನಂತರ ಆತನು ಮುಂದುವರೆದು ದೇವರ ಶುಭ ವರುಷದ ಜೊತೆ ಜೊತೆಗೆ ನಮ್ಮ ದೇವರು ಮುಯ್ಯಿ ತೀರಿಸುವ ದಿನವನ್ನು ಸಾರಿ ಪ್ರಚುರ ಪಡಿಸುತ್ತಾನೆ (ಯೆಶಾಯ 61:2).

ಯೆಶಾಯನ ಪ್ರವಾದನೆಯು ಯಾವಾಗ ನೆರವೇರಿತು? (ಲೂಕ 4:16–21). ಯೇಸುಕ್ರಿಸ್ತನ ಸೇವೆಯು ಇದನ್ನು ಹೇಗೆ ಸಾಧಿಸಿತು? ಹಾಗೆಯೇ, ಈ ಮುಖ್ಯವಾದ ಪ್ರಶ್ನೆಯನ್ನು ನೀವು ನಿಮ್ಮನ್ನೇ ಕೇಳಿಕೊಳ್ಳಿರಿ: ನಾವೇ ಯೇಸುಕ್ರಿಸ್ತನಲ್ಲ. ಆದರೆ ಆತನನ್ನು ಲೋಕಕ್ಕೆ ಪ್ರತಿನಿಧಿಸುವವರಾಗಿದ್ದೇವೆ. ಯೆಶಾಯ 61:1–3ರಲ್ಲಿ ಹೇಳಿರುವ, ನಾವು ಕೂಡ ನಮ್ಮ ಪರಿಮಿತಿಯಲ್ಲಿ ಮಾಡಬೇಕಾದ ಯಾವ ಕಾರ್ಯಗಳನ್ನು ಯೇಸುಕ್ರಿಸ್ತನು ಮಾಡಿದನು? ಮತ್ತು ನಾವು ಕೂಡ ಇವುಗಳನ್ನು ನಮ್ಮ ದೈನಂದಿನ ಜೀವಿತದಲ್ಲಿ ಮಾಡಬಹುದಾದ ಕೆಲವು ಮಾರ್ಗಗಳಾವುವು?

**ಗುರುವಾರ** **ಮಾರ್ಚ್ 18**

## ನಮ್ಮ ದೇವರು ಮುಯ್ಯಿತೀರಿಸುವ ದಿನ (ಯೆಶಾಯ 61:2)

ಎಲ್ಲಾ ಶುಭವರ್ತಮಾನಗಳ ನಡುವೆ, ಯೆಶಾಯ 61ನೇ ಅಧ್ಯಾಯದಲ್ಲಿ ನಿರೂಪಿಸಲಾಗಿರುವಂತೆ ಮೆಸ್ಸೀಯನು ಯಾಕೆ "ದೇವರು ಮುಯ್ಯಿತೀರಿಸುವ ದಿನವನ್ನು" ಸಾರಿ ಹೇಳುತ್ತಾನೆ? ಈ ಪ್ರವಾದನೆಯು ಯಾವಾಗ ನೆರವೇರುತ್ತದೆ?

ಮೆಸ್ಸೀಯನಾದ ಯೇಸುವು ನಜರೇತಿನ ಸಭಾಮಂದಿರದಲ್ಲಿ ಯೆಶಾಯ 61ನೇ ಅಧ್ಯಾಯದಲ್ಲಿ "ದೇವರ ಶುಭವರುಷ"ವನ್ನು ಹೇಳುವ ವಾಕ್ಯಗಳನ್ನು ಓದಿದನು (ಯೆಶಾಯ 61:2, ಲೂಕ 4:19). ಆತನು ಅದನ್ನು ಓದಿ ಮುಗಿಸಿದ ಮೇಲೆ ಅವರಿಗೆ– "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ" ಎಂದು ಹೇಳಿದನು (ಲೂಕ 4:21). ಆದುದರಿಂದ ಆತನು ಉದ್ದೇಶಪೂರ್ವಕವಾಗಿ, ನಿರ್ದಿಷ್ಟವಾಗಿ ಆ ವಚನದ "ನಮ್ಮ ದೇವರು ಮುಯ್ಯಿ ತೀರಿಸುವ ದಿನ" ಎಂಬುದನ್ನು ಓದದೆ ಬಿಟ್ಟನು. ಯಾಕೆಂದರೆ ಆತನು ಕೆಡುಕನ (ಸೈತಾನ) ಬಂಧನದಿಂದ ಜನರನ್ನು ಬಿಡಿಸಿ ಅವರ ರೋಗಗಳನ್ನು ವಾಸಿಪಡಿಸಿ, ಸತ್ಯದ ಮಾರ್ಗಗಳನ್ನು ಬೋಧಿಸಿ ಅವರಿಗೆ ನಿರೀಕ್ಷೆ ತುಂಬುವ ಶುಭವರ್ತಮಾನದ ಸೇವೆಯನ್ನು ಮಾಡುತ್ತಿರುವಾಗ ಮುಯ್ಯಿ ತೀರಿಸುವ ದಿನ ಇನ್ನು ಮುಂದಕ್ಕೆ ಬರಬೇಕಾಗಿದ್ದುದರಿಂದ ಅದನ್ನು ಓದದೆ ಬಿಟ್ಟನು. ಮತ್ತಾಯ 24ನೇ ಅಧ್ಯಾಯದಲ್ಲಿ (ಮಾರ್ಚ್ 13, ಲೂಕ 21ನ್ನು ಹೋಲಿಕೆ ಮಾಡಿರಿ).

ಯೇಸುವು ತನ್ನ ಶಿಷ್ಯರಿಗೆ ಮುಂದೆ ಬರಬೇಕಾದ ನ್ಯಾಯವಿಚಾರಣೆಯ ಬಗ್ಗೆ ಮುಂಚಿತವಾಗಿ ತಿಳಿಸಿದನು.

ಯೆಶಾಯ 61ನೇ ಅಧ್ಯಾಯದಲ್ಲಿ ಹೇಳಿರುವ ದೇವರು ಮುಯ್ಯಿ ತೀರಿಸುವ ದಿನವು "ಯೆಹೋವನ ಆಗಮನದ ಭಯಂಕರವಾದ ಮಹಾದಿನ"ವಾಗಿದ್ದು (ಯೋವೆಲ 2:31, ಮಲಾಕಿ 4:5). ಯೇಸುಕ್ರಿಸ್ತನು ತನ್ನ ವೈರಿಗಳನ್ನು ಸೋಲಿಸಿ ಭೂಮಿಯನ್ನು ವಿಮೋಚಿಸುವುದಕ್ಕೆ ಅಂತ್ಯಕಾಲದ ಹಿಂಸೆಯನ್ನು ತಾಳಿಕೊಂಡ "ಉಳಿದ ಜನರನ್ನು" ಬಿಡಿಸುವುದಕ್ಕೆ (ಪ್ರಕಟನೆ 19ನ್ನು ದಾನಿ 2:44,45ಕ್ಕೆ ಹೋಲಿಸಿರಿ). ಎರಡನೇ ಸಲ ಬರುವ ದಿನವಾಗಿದೆ. ಆದುದರಿಂದ ಯೇಸುಕ್ರಿಸ್ತನು ದೇವರು ನೇಮಿಸಿರುವ ಶುಭವರುಷದ ಆರಂಭವನ್ನು ಪ್ರಕಟಿಸಿದಾಗ್ಯೂ ಅದರ ಮುಕ್ತಾಯವು ಆತನ ಎರಡನೇ ಬರೋಣದಲ್ಲಿ ನೆರವೇರುತ್ತದೆ. ಪ್ರೀತಿ ಸ್ವರೂಪಿಯಾದ ದೇವರು ಮುಯ್ಯಿ ತೀರಿಸುವ ದೇವರೂ ಸಹಾ ಆಗಿರುತ್ತಾನೆ ಎಂಬ ಈ ಅಭಿಪ್ರಾಯದೊಡನೆ ಹೇಗೆ ಸಂಧಾನ ಮಾಡಿಕೊಳ್ಳುವಿರಿ? ಈ ಅಭಿಪ್ರಾಯವು ಅಸಂಬದ್ಧವಾದುದೇ? ಅಥವಾ ದೇವರು ಮುಯ್ಯಿ ತೀರಿಸುವಾಗ ಆತನ ಪ್ರೀತಿಯು ವ್ಯಕ್ತವಾಗುತ್ತದೆಯೆ? ಹಾಗಾದರೆ ಅದು ಹೇಗೆ? ನಿಮ್ಮ ಉತ್ತರವನ್ನು ವಿವರಿಸಿರಿ–

"ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು" ಎಂದು ಯೇಸುಕ್ರಿಸ್ತನು ಹೇಳುತ್ತಾನೆ. ಮತ್ತಾಯ 5:39 ಆತನು ಹಾಗೆ ಹೇಳಿದ್ದಾಗ್ಯೂ ನ್ಯಾಯ ಮತ್ತು ದಂಡನೆ ಖಂಡಿತವಾಗಿಯೂ ವಿಧಿಸಲ್ಪಡುತ್ತದೆ ಎಂಬುದನ್ನು ಸಹಾ ಸ್ಪಷ್ಟಪಡಿಸುತ್ತಾನೆ (ಮತ್ತಾಯ 8:12). ಪೌಲನು, "ಯಾರೂ ಅಪಕಾರಕ್ಕೆ ಅಪಕಾರ ಮಾಡದಂತೆ ನೋಡಿಕೊಳ್ಳಿರಿ" ಎಂದು ಹೇಳಿದ್ದಾಗ್ಯೂ (1 ಥೆಸ 5:15), "ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು" ಎಂಬುದಾಗಿಯೂ ಸಹ ಹೇಳುತ್ತಾನೆ (2 ಥೆಸ 1:8). ಇದರಲ್ಲಿ ವ್ಯತ್ಯಾಸವಿದೆ ನಿಜ, ಅದೇನೆಂದರೆ ದೇವರು ಅನಂತ ಜ್ಞಾನದಿಂದಲೂ ಕರುಣೆಯಿಂದಲೂ ನ್ಯಾಯ ಮತ್ತು ಪ್ರತೀಕಾರ ಎರಡನ್ನೂ ಸಂಪೂರ್ಣ

ಸಮಂಜಸವಾಗಿ ತರಬಲ್ಲದವನಾಗಿದ್ದಾನೆ. ಮನುಷ್ಯನು ನೀಡುವ ನ್ಯಾಯ, ಮಾಡುವ ಪ್ರತೀಕಾರ ಯಾವಾಗಲೂ ಮಾನವೀಯ ದೋಷದಿಂದಲೂ ದೌರ್ಬಲ್ಯದಿಂದಲೂ ಅಸ್ಥಿರತೆಯಿಂದಲೂ ಕೂಡಿರುತ್ತವೆ. ದೇವರ ನ್ಯಾಯದಲ್ಲಿ ದಿಟವಾಗಿಯೂ ಈ ಯಾವ ಮಾನವೀಯ ಪರಿಮಿತಿಗಳು (ನ್ಯೂನತೆಗಳು) ಇರುವುದಿಲ್ಲ.

ಕೆಳಗೆ ಹೇಳಿರುವ ಯಾವ ಸಂದರ್ಭಗಳಲ್ಲಿ ನೀವು ಕೆಟ್ಟದಕ್ಕೆ ಪ್ರತೀಕಾರವಾಗುವುದನ್ನು ನೋಡಲು ಬಯಸುವಿರಿ? (1) ನಿಮಗೆ ಪ್ರೀತಿಯಿಲ್ಲದವನನ್ನು ಅವಮಾನ ಪಡಿಸುವ ಒಬ್ಬ ವ್ಯಕ್ತಿಗೆ (2) ನೀವು ಪ್ರೀತಿಸುವವರನ್ನು ಅವಮಾನ ಪಡಿಸುವ ವ್ಯಕ್ತಿಗೆ? ದೇವರು ನಮಗೆ ತೋರಿಸುವ ಪ್ರೀತಿಗೂ ಮತ್ತು ಪ್ರತೀಕಾರಕ್ಕೂ ಇರುವ ಸಂಬಂಧವನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ?

**ಶುಕ್ರವಾರ** **ಮಾರ್ಚ್ 19**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ Patriarchs and Prophets, pp 376-378, The Desire of Ages PP 236-243 ನ್ನು ಸಹಾ ಓದಿರಿ.

ಯೇಸು ಕ್ರಿಸ್ತನು ತನ್ನನ್ನು ಕುರಿತ ಪ್ರವಾದನೆಗಳ ಸಜೀವ ಪ್ರತಿಪಾದಕನಾಗಿ ಜನರ ಮುಂದೆ ನಿಂತನು. ತಾನು ಓದಿದ ವಚನಗಳಿಂದ, ಮೆಸ್ಸೀಯನು ಮಾಡುವ ಸೇವೆಯನ್ನು ಕುರಿತು ಆತನು ಕುಗ್ಗಿಹೋದವರನ್ನು ಸಂತೈಸುವವನು, ಸೆರೆಯಾದವರನ್ನು ಬಿಡಿಸುವವನು, ರೋಗ ಬಾಧಿತರನ್ನು ಗುಣಪಡಿಸುವವನು, ಕುರುಡರಿಗೆ ಕಣ್ಣು ಕೊಡುವವನು, ಲೋಕಕ್ಕೆ ಸತ್ಯ ಬೆಳಕನ್ನು ಪ್ರಕಟಪಡಿಸುವವನು ಎಂಬುದನ್ನು ಜೀವಿಸಿ ತೋರಿಸಿದನು.

ಆತನ ಸಭ್ಯ ನಡವಳಿಕೆ ಮತ್ತು ಬಾಯಿಂದ ಹೊರಡುತ್ತಿದ್ದ ಅದ್ಭುತವಾದ ಮಾತುಗಳು ಕೇಳುಗರಿಗೆ ಹಿಂದೆ ಎಂದೂ ಅನುಭವಿಸದ ಪುಳಕವನ್ನುಂಟು ಮಾಡುತ್ತಿದ್ದವು. ಆತನ ದಿವ್ಯಪ್ರಭಾವದ ಉಬ್ಬರಇಳಿತವು ಎಲ್ಲಾ ತಡೆಗೋಡೆಗಳನ್ನು ನೆಲಕ್ಕೆ ಕೆಡುಹಿತು. ಮೋಶೆಯ ಹಾಗೆಯೇ ಜನರು ಕಣ್ಣಿಗೆ ಕಾಣದ್ದನ್ನು ಕಂಡರು. ಅವರ ಹೃದಯಗಳು ಪರಿಶುದ್ಧಾತ್ಮನಿಂದ ಓಲಾಡಿದವುಗಳಾಗಿ ಅವರು

ಉತ್ಸಾಹದಿಂದ ದೇವರಿಗೆ ಸ್ತೋತ್ರಗೈದು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದರು" – ಎಲೆನ್ ಜಿ ವೈಟಮ್ಮನವರ The Desire of Ages P 237.

ದೇವರು ಮುಯ್ಯಿ ತೀರಿಸುವ ದಿನವು ಬರುತ್ತಿದೆ – ಆತನ ರೋಷಭರಿತವಾದ ಕೋಪದ ದಿನ. ಆತನು ಬರುವ ದಿನವನ್ನು ಯಾರು ತಾಳಿಕೊಳ್ಳುವರು? ದೇವರ ಆತ್ಮನ ವಿರುದ್ಧವಾಗಿ ಮನುಷ್ಯರು ತಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳುತ್ತಾರೆ. ಆತನ ಕೋಪದ ಬಾಣಗಳು ಅಪರಾಧವನ್ನು ಮನಸ್ಸಿಗೆ ಅರುಹುವ ಬಾಣಗಳು ಎಲ್ಲ ಛೇದಿಸಿ ಹೋಗಲಾರವೋ ಅಲ್ಲಿಗೆ ಆತನ ರೋಷದ ಬಾಣಗಳು ಛೇದಿಸಿಕೊಂಡು ಹೋಗುತ್ತವೆ. ದೇವರು ಪಾಪಿಗೆ ತಕ್ಕ ಶಾಸ್ತಿ ಮಾಡುವ ದಿನವು ದೂರದಲ್ಲಿ ಉಳಿದಿಲ್ಲ. ಸುಳ್ಳು ಕುರುಬನು ದ್ರೋಹಿಯನ್ನು ಆ ದಿನದಲ್ಲಿ ರಕ್ಷಿಸಬಲ್ಲನೆ? ಯಾವನು ಅವಿಧೇಯತೆಯ ಮಾರ್ಗದಲ್ಲಿ ನಡೆಯುವ ಜನಸಮೂಹದ ಜೊತೆ ಹೋಗುತ್ತಾನೋ ಅವನಿಗೆ ಕ್ಷಮಾಪಣೆಯಾಗುತ್ತದೆಯೆ? ಜನಪ್ರಿಯತೆ ಅಥವಾ ಜನಬಲ ಯಾರನ್ನಾದರೂ ನಿರಪರಾಧಿಯನ್ನಾಗಿ ಮಾಡುತ್ತದೋ? ಒಬ್ಬ ಅಲಕ್ಷ್ಯಗಾರನೂ ಉದಾಸೀನ ಮಾಡುವವನೂ ಆದ ಮನುಷ್ಯನು ಪರಿಗಣಿಸಿಕೊಂಡು ಇತ್ಯರ್ಥ ಮಾಡಿಕೊಳ್ಳಬೇಕಾದ ಪ್ರಶ್ನೆಗಳು ಇವುಗಳೆ" – ಎಲೆನ್ ಜಿ ವೈಟಮ್ಮನವರ Faith and Works ಪುಸ್ತಕದಲ್ಲಿ 33ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಬ್ಬ ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯ ಬೋಧಕರು ತಮ್ಮ ಸಭೆಯ ಸದಸ್ಯರು ಪ್ರತ್ಯೇಕವಾದಿಗಳಾಗಿದ್ದು ಸಭೆಗೆ ಯಾರನ್ನು ಹೊಸದಾಗಿ ಸೇರಿಕೊಳ್ಳಲು ಒಪ್ಪದಿರುವುದೇ ನನ್ನ ಸೇವೆಯಲ್ಲಿರುವ ನಂಬರ್ ಒಂದನೇ ಸಮಸ್ಯೆಯಾಗಿದೆಯೆಂದು ಪರಹಿತ ಚಿಂತನೆಯ ಹೇಳಿಕೆಯನ್ನು ನೀಡಿದ್ದಾರೆ. ತಮ್ಮ ಸಭೆಯಲ್ಲಿ ಯಾರಾದರೂ ಮಾರ್ಗ ತಪ್ಪಿಹೋದರೆ ಅವರನ್ನೇ ಸೇರಿಸಿಕೊಳ್ಳದ ಕ್ರೈಸ್ತರು, ಇತರರಿಗೆ ಅಂತ್ಯಕಾಲದಲ್ಲಿ ರಕ್ಷಣೆ ಹೊಂದುವ ಅವಕಾಶವು ಸಿಗುವಂತೆ ಪ್ರೀತಿ, ನಿರೀಕ್ಷೆಮತ್ತು ಪರಲೋಕ ರಾಜ್ಯದ ಸುವಾರ್ತೆಯನ್ನು ಲೋಕದಲ್ಲಿರುವ ಎಲ್ಲರಿಗೂ ತೆಗೆದುಕೊಂಡು ಹೋಗುವುದು ಹೇಗೆ?

**ಸಾರಾಂಶ:** ದೇವರು ಅನ್ಯಾಯ ತುಂಬಿದ ಸಮಾಜವನ್ನು ಶುದ್ಧೀಕರಿಸುತ್ತಾನೆ. ಎದುರು ಬಿದ್ದವರನ್ನು ಹೊರಕ್ಕೆ ಹಾಕಿ, ಪಾಪದ ಜೀವಿತವನ್ನು ನಡೆಸಿ ತನ್ನಿಂದ ದೂರ ಹೋಗಿದ್ದವರು ಅವುಗಳನ್ನು ತ್ಯಜಿಸಿ ತಿರುಗಿಕೊಂಡು ಬಂದಾಗ ಅವರನ್ನು ಮತ್ತೆ ಸೇರಿಸಿಕೊಳ್ಳುವುದರ ಮೂಲಕ ಈ ಸಮಾಜವನ್ನು ಶುದ್ಧೀಕರಿಸುತ್ತಾನೆ. ದೇವರ ಇರುವಿಕೆಯಿಂದ ಸಿಗುವ ಆಶೀರ್ವಾದಗಳನ್ನು ಇತರೆ ಜನಾಂಗಗಳೂ ಕೂಡ ಹೊಂದಿಕೊಳ್ಳುವಂತೆ ಅವರನ್ನು ತನ್ನ ಕಡೆಗೆ ಮತ್ತು ತನ್ನ ಜನರ ಕಡೆಗೆ ಸೆಳೆಯುತ್ತಾನೆ. ಆದುದರಿಂದ ಮೆಸ್ಸೀಯನು (ಯೇಸುಕ್ರಿಸ್ತನು) ಸಾರಿ ಹೇಳುವ "ದೇವರು ನೇಮಿಸಿದ ಶುಭವರುಷದ" ಕಾಲದಲ್ಲಿ ಅವರೂ ಸಹ ಸಂತೋಷವನ್ನು ಅನುಭವಿಸುತ್ತಾರೆ.